ಅವುಗಳು ಅಮೃತಮಹಲ್, ಹಳ್ಳಿಕಾರ್, ಖಿಲ್ಲಾರ್, ಕೃಷ್ಣವ್ಯಾಲಿ, ದೇವಣಿ ಹಾಗೂ ಮಲೆನಾಡು ಗಿಡ್ಡ ತಳಿಗಳಿದ್ದು, ರಾಜ್ಯದ ತಳಿ ಅಭಿವೃದ್ಧಿಗಾಗಿ ಈ ತಳಿಗಳ ಘನೀಕೃತ ವೀರ್ಯನಳಿಕೆ ಉತ್ಪಾದಿಸಿ ಎಲ್ಲಾ ಪಶುವೈದ್ಯ ಸಂಸ್ಥೆಗಳಲ್ಲಿ ಕೃತಕ ಗರ್ಭಧಾರಣೆ ಮುಖಾಂತರ ತಳಿ ಅಭಿವೃದ್ಧಿಗೆ ಕ್ರಮವಹಿಸಲಾಗಿದೆ.

ಸ್ಥಳೀಯ ರಾಸುಗಳ ಗಂಡು ಕರುಗಳ ಸಾಕಾಣಿಕೆಗಾಗಿ ರೂ. 10.000/–ಗಳ ಪ್ರೋತ್ಸಾಹ ಧನವನ್ನು ಇಲಾಖೆಯಿಂದ ನೀಡಲಾಗುತ್ತಿದ್ದು, ಯೋಜನೆ ಜಾರಿಯಲ್ಲಿದೆ.

ಆ) ಗಿರ್ ತಳಿಯ ಸ್ವಾಭಾವಿಕ ಭೌಗೋಳಿಕ ಪ್ರದೇಶ ಗುಜರಾತ್ ಹಾಗೂ ಸುತ್ತಮುತ್ತಲ ಪ್ರದೇಶಗಳಾಗಿದ್ದು ಆಯಾ ಸ್ಥಳಸದ ವಾತಾವರಣಕ್ಕೆ ಹೊಂದಿಕೊಂಡಿರುವ ತಳಿಯಾಗಿರುತ್ತದೆ. ಅಮೃತಮಹಲ್ ತಳಿಯು ಕೃಷಿ / ಭಾರ ಎಳೆಯುವ ಸಾಮರ್ಥ್ಯಕ್ಕೆ ಸೂಕ್ತ ತಳಿಯಾಗಿದ್ದು, ಹಾಲಿನ ಉತ್ಪಾದನೆ ಕಡಮೆ. ಇಲಾಖಾ ವತಿಯಿಂದ ದೇಶಿಯ ತಳಿ ಗಂಡು ಕರುಗಳ ಸಾಕಾಣಿಕೆಗೆ, ಪ್ರೋತ್ಸಾಹಿಸಲು ರೂ. 10,000 ಗಳನ್ನು ಸಹಾಯಧನ ರೂಪದಲ್ಲಿ ಪಶು ಆಹಾರ ಖರೀದಿಗೆ ವಿತರಿಸಲು ನಿಗದಿಪಡಿಸಲಾಗಿದ್ದು, ಯೋಜನೆ ಅನುಷ್ಠಾನದಲ್ಲಿದೆ.

ಕರ್ನಾಟಕ ರಾಜ್ಯದ ಅಜ್ಜಂಪುರ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಸ್ಥಾಪನೆಯಾಗಿರುವ ಇಲಾಖಾ ಫಾರಂನಲ್ಲಿ ಅಮೃತಮಹಲ್ ತಳಿಯನ್ನು ಸೆಲೆಕ್ಟಿವ್ ಬ್ರೀಡಿಂಗ್ ಕಾರ್ಯಕ್ರಮದ ಮೂಲಕ ಸಂರಕ್ಷಣೆ ಹಾಗೂ ಈ ಫಾರ್ಮನಲ್ಲಿ ಜನಿಸಿದ ಗಂಡು ಕರುಗಳನ್ನು 18 ತಿಂಗಳವರೆಗೆ ವಿಶೇಷವಾಗಿ ಪೋಷಣೆ ಮಾಡಿ ಸ್ಥಳೀಯ ಸುತ್ತಮುತ್ತಲ ಜಿಲ್ಲೆಗಳ ರೈತರಿಗೆ ಸಂತಾನೋತ್ಪತ್ತಿ ಹಾಗೂ ಅಭವೃದ್ಧಿಗೆ ವಿತರಿಸಲಾಗುತ್ತಿದೆ ಹಾಗೂ ಉತ್ಕೃಷ್ಟ ತಳಿ ಗುಣಗಳಿರುವ ಹೋರಿ ಕರುಗಳನ್ನು ವೀರ್ಯ ಉತ್ಪಾದನೆಗಾಗಿ ಇಲಾಖೆಯ ವೀರ್ಯ ಉತ್ಪಾದನಾ ಕೇಂದ್ರಗಳಿಗೆ ಸರಬರಾಜು ಮಾಡಲಾಗುತ್ತಿದೆ. ಇದೇ ಕಾರ್ಯಕ್ರಮವನ್ನು ಕುಣಿಕೇನಹಳ್ಳಿ, ತುಮಕೂರು ಜಿಲ್ಲೆಯಲ್ಲಿ ಹಳ್ಳಿಕಾರ್ ತಳಿಗಳನ್ನು ಬಂಕಾಪುರ, ಹಾವೇರಿ ಜಿಲ್ಲೆಯಲ್ಲಿ ಖಿಲ್ಲಾರ್ ತಳಿಗಳನ್ನು ನಿರ್ವಹಣೆ ಮಾಡಿ ಅಭಿವೃದ್ಧಿಪಡಿಸಲಾಗುತ್ತಿದೆ.

ಇ) ರಾಷ್ಟ್ರೀಯ ಜಾನುವಾರು ಮಿಷನ್ ಜಾನುವಾರು ವಿಮೆ 2014–15 ಯೋಜನೆಯಡಿ ಸ್ಥಳೀಯ ತಳಿ ಜಾನುವಾರುಗಳನ್ನು ವಿಮೆಗೆ ಒಳಪಡಿಸಲು ಅವಕಾಶ ಕಲ್ಪಿಸಲಾಗಿದ್ದು, ರೈತರ ದೇಶಿ ತಳಿ ರಾಸುಗಳ ಅಕಾಲಿಕ ಮರಣದಿಂದ ಉಂಟಾಗುವ ನಷ್ಟ ಭರಿಸಲು ಸೂಕ್ತ ಯೋಜನೆಯಾಗಿದ್ದು. ಈ ಯೋಜನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಮುಜರಾಯಿ ದೇವಸ್ಥಾನಗಳು

1105(2040) **ಶ್ರೀ ಐಹೊಳೆ ಡಿ. ಮಹಾಲಿಂಗಪ್ಪ (ರಾಯಭಾಗ):–** ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :–

ಅ) ಕಳೆದ ಎರಡು ವರ್ಷಗಳಲ್ಲಿ ಬೆಳಗಾವಿ ಜಿಲ್ಲಾ ವ್ಯಾಪ್ತಿಯಲ್ಲಿ ಧಾರ್ಮಿಕ ಮತ್ತು ದತ್ತಿ ಇಲಾಖೆಯಡಿ ಎಷ್ಟು ದೇವಸ್ಥಾನಗಳು ಬರುತ್ತವೆ ; (ಸಂಪೂರ್ಣ ಮಾಹಿತಿ ನೀಡುವುದು)

ಆ) ಈ ದೇವಸ್ಥಾನಗಳ ನಿರ್ವಹಣೆಗೆ ಯಾರನ್ನು ಜವಾಬ್ದಾರರನ್ನಾಗಿ ನೇಮಿಸಲಾಗಿದೆ ; (ವಿವರ ನೀಡುವುದು)

ಇ) ಈ ದೇವಸ್ಥಾನಗಳ ನಿರ್ವಹಣೆಗೆ ಪ್ರತಿ ವರ್ಷ ಬಿಡುಗಡೆ ಮಾಡಿರುವ ಹಣವೆಷ್ಟು ; (ದೇವಸ್ಥಾನವಾರು ವಿವರ ನೀಡುವುದು)

ಈ) ಈ ಜಿಲ್ಲೆಯ ಅನೇಕ ದೇವಸ್ಥಾನಗಳಲ್ಲಿ ಮೂಲಭೂತ ಸೌಕರ್ಯಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಉ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮವೇನು ? (ವಿವರ ನೀಡುವುದು)

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಪಶುಸಂಗೋಪನಾ ಮತ್ತು ಮುಜರಾಯಿ ಸಚಿವರು):–

ಅ) ಬೆಳಗಾವಿ ಜಿಲ್ಲೆಯಲ್ಲಿ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಗೆ ಒಳಪಟ್ಟ ಒಟ್ಟು 3808 ದೇವಸ್ಥಾನಗಳು/ ಅಧಿಸೂಚಿತ ಸಂಸ್ಥೆಗಳಿರುತ್ತವೆ.

ಆ) ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ನಿಯಮಗಳು 2002ರ ನಿಯಮ (3) ರಲ್ಲಿ ದೇವಾಲಯಗಳ ವಾರ್ಷಿಕ ವರಮಾನದ ಆಧಾರದ ಮೇಲೆ ಅದರ ನಿರ್ವಹಣೆಗಾಗಿ ಈ ಕೆಳಕಂಡಂತೆ ನಿಯಮಿಸಲಾದ ಪ್ರಾಧಿಕಾರಗಳನ್ನು ಜವಾಬ್ದಾರರನ್ನಾಗಿ ನೇಮಿಸಲಾಗಿರುತ್ತದೆ.

ವಾರ್ಷಿಕ ವರಮಾನ ರೂ.25.00 ಲಕ್ಷಗಳನ್ನು ಮೀರುವ ಅಧಿಸೂಚಿತ ಸಂಸ್ಥೆಗಳಿಗೆ	ಧಾರ್ಮಿಕ ದತ್ತಿ ಆಯುಕ್ತರು
ವಾರ್ಷಿಕ ವರಮಾನ ರೂ.5.00 ಲಕ್ಷಗಳನ್ನು ಮೀರುವ ಆದರೆ ರೂ.25 00 ಲಕ್ಷಗಳನ್ನು ಮೀರದ ಅಧಿಸೂಚನೆ ಸಂಸ್ಥೆಗಳಿಗೆ	ಉಪ ಆಯುಕ್ತರು (ಜಿಲ್ಲಾಧಿಕಾರಿಗಳು)
ವಾರ್ಷಿಕ ವರಮಾನ ರೂ 5.00 ಲಕ್ಷಗಳನ್ನು ಮೀರದ ಅಧಿಸೂಚಿತ ಸಂಸ್ಥೆಗಳಿಗೆ	ಸಹಾಯಕ ಆಯುಕ್ತರು

ಇ) ದೇವಸ್ಥಾನಗಳ ನಿರ್ವಹಣೆಗೆ ಪ್ರತ್ಯೇಕ ಅನುದಾನ ಬಿಡುಗಡೆ ಮಾಡಲಾಗುವುದಿಲ್ಲ. ದೇವಾಲಯಗಳಿಂದ ಬರುವ ಆದಾಯವನ್ನು ಆಯಾಯಾ ದೇವಾಲಯಗಳ ನಿರ್ವಹಣೆ/ ದೇವಾಲಯಕ್ಕೆ ಸಂಬಂಧಿಸಿದ ಕಾರ್ಯಕ್ರಮ ಹಾಗೂ ಅಭಿವೃದ್ಧಿ ಕಾರ್ಯಕ್ಕಾಗಿ ಬಳಸಲಾಗುತ್ತಿದೆ.

2013–14ನೇ ಸಾಲಿನಲ್ಲಿ ಬೆಳಗಾವಿ ಜಿಲ್ಲೆಯ ದೇವಸ್ಥಾನಗಳ ದುರಸ್ಥಿ, ಜೀರ್ಣೋದ್ಧಾರ, ಅಭಿವೃದ್ಧಿಗಾಗಿ ಮುಜರಾಯಿ ಇಲಾಖೆಯಿಂದ ಈ ಕೆಳಕಂಡ ಯೋಜನೆಗಳಡಿ ಒಟ್ಟು ರೂ.2022.10 ಲಕ್ಷಗಳ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ.

ಕ್ರ ಸಂ.	ಯೋಜನೆ	ಒಟ್ಟು ಮೊತ್ತ (ರೂ.ಲಕ್ಷಗಳಲ್ಲಿ)
1.	ದುರಸ್ಥಿ, ಜೀರ್ಣೋದ್ಧಾರ, ಅಭಿವೃದ್ಧಿ	1752.10
2.	ಆರಾಧನಾ, ವಿಶೇಷಘಟಕ, ಗಿರಿಜನ ಉಪಯೋಜನೆ	270.00
	ಒಟ್ಟು	**2022.10**

ಈ) ಹೌದು.

ಉ) ಆಯುಕ್ತಾಲಯದ ಸುತ್ತೋಲೆ ಸಂಖ್ಯೆ:ಸಿಎನ್ಆರ್/1/ಸಿಆರ್/346/2010–11, ದಿನಾಂಕ: 22–3–2011 ರಲ್ಲಿ ಮುಜರಾಯಿ ದೇವಸ್ಥಾನಗಳಿಗೆ ಬರುವ ಭಕ್ತಾದಿಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ. ಸರ್ಕಾರವು ಪ್ರತಿ ಆರ್ಥಿಕ ವರ್ಷದಲ್ಲಿ ಈ ಕೆಳಕಂಡ ಯೋಜನೆಗಳಡಿಯಲ್ಲಿ ಆಯವ್ಯಯದಲ್ಲಿ ಒದಗಿಸುವ ಅನುದಾನ ಧಾರ್ಮಿಕ ಸಂಸ್ಥೆಗಳ / ದೇವಾಲಯಗಳ ಅಭಿವೃದ್ಧಿಗಾಗಿ ಬಿಡುಗಡೆ ಮಾಡಲಾಗುತ್ತಿದೆ.

ಕ್ರ.ಸಂ.	ಯೋಜನೆ
1.	ದುರಸ್ಥಿ/ಜೀರ್ಣೋದ್ಧಾರ, ನವನಿರ್ಮಾಣ
2.	ಆರಾಧನಾ
3.	ವಿಶೇಷಘಟಕ
4.	ಗಿರಿಜನ ಉಪಯೋಜನೆ